# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 26 (134)
ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 15.07.2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಶೂನ್ಯ ಫಲಿತಾಂಶ ಗಳಿಸಿದ ಶಾಲೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸರ್ಕಾರಿ ಶಾಲೆಗಳ ಮತ್ತು ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು; ಸದರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2023-24 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಶೂನ್ಯ ಫಲಿತಾಂಶ ಗಳಿಸಿದ ಶಾಲೆಗಳ ಸಂಖ್ಯೆ:<br>• ಸರ್ಕಾರಿ ಶಾಲೆಗಳು:3<br>• ಅನುದಾನಿತ ಶಾಲೆಗಳು:13<br>• ಅನುದಾನರಹಿತ ಶಾಲೆಗಳು:62<br>(ಜಿಲ್ಲಾವಾರು ಪಟ್ಟಿ **ಅನುಬಂಧ-1**) |
| ಆ) | ಶೂನ್ಯ ಫಲಿತಾಂಶ ಗಳಿಸಿದ ಸರ್ಕಾರಿ ಶಾಲೆಗಳಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳು ಎಷ್ಟು; ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; | ಶೂನ್ಯ ಫಲಿತಾಂಶ ಗಳಿಸಿದ ಸರ್ಕಾರಿ ಶಾಲೆಗಳಲ್ಲಿ ಮಂಜೂರಾದ ಶಿಕ್ಷಕರ ಸಂಖ್ಯೆ ಹಾಗೂ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ: (see table below) |

| ಕ್ರ ಸಂ | ಜಿಲ್ಲೆ | ಶೂನ್ಯ ಫಲಿತಾಂಶ ಶಾಲೆಗಳ ಸಂಖ್ಯೆ | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ | ಅತಿಥಿ ಶಿಕ್ಷಕರು |
|---|---|---|---|---|---|
| 1 | ಯಾದಗಿರಿ | 2 | 14 | 12 | 12 |
| 2 | ಕೊಪ್ಪಳ | 1 | 7 | 6 | 6 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಶೂನ್ಯ ಫಲಿತಾಂಶ ಪಡೆದ ಸರ್ಕಾರಿ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳಿಗೆ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು | **ಸರ್ಕಾರಿ ಪ್ರೌಢ ಶಾಲೆಗೆ ಸಂಬಂಧಿಸಿದಂತೆ**<br>ಸರ್ಕಾರದ ಪತ್ರ ಸಂಖ್ಯೆ:ಇಪಿ 14 ಎಲ್‌ಬಿಪಿ 2022, ದಿನಾಂಕ:13/09/2022ರ ಪತ್ರದಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ವಿವಿಧ ವೃಂದದ ದೈಹಿಕ ಶಿಕ್ಷಣ ಶಿಕ್ಷಕರ 200 ಹುದ್ದೆಗಳು ಸೇರಿ ಒಟ್ಟು 2500 ಶಿಕ್ಷಕರುಗಳ<br>ಹುದ್ದೆಗಳನ್ನು 15000 ಪದವೀಧರ ಪ್ರಾಥಮಿಕ ಶಾಲಾ ನೇಮಕಾತಿಯಲ್ಲಿ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳಿಗೆ |

| | | |
|---|---|---|
| ಇ) | ಶೂನ್ಯ ಫಲಿತಾಂಶ ಪಡೆದ ಸರ್ಕಾರಿ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳಿಗೆ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು | ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿಯನ್ನು ನೀಡಲಾಗಿತ್ತು.<br><br>ಆದರೆ ಸದರಿ 15000 ಹುದ್ದೆಗಳಲ್ಲಿ ಪ್ರೌಢಶಾಲಾ ಶಿಕ್ಷಕರುಗಳ ನೇಮಕಾತಿಗೆ 1648 ಹುದ್ದೆಗಳು ಮಾತ್ರ ಉಳಿದಿರುವ ಪ್ರಯುಕ್ತ ಪ್ರಸ್ತುತ ಸಾಲಿನಲ್ಲಿ ಒಟ್ಟು 2500 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. ಆರ್ಥಿಕ ಇಲಾಖೆಯ ಸಹಮತಿ ದೊರೆತ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.<br><br>ರಾಜ್ಯದಲ್ಲಿ ಶಿಕ್ಷಕರ ಕೊರತೆ ನೀಗಿಸಲು ಪ್ರತಿ ವರ್ಷವು ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಿ ಫಲಿತಾಂಶ ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಸದರಿ ಶಾಲೆಗಳಲ್ಲಿ ಫಲಿತಾಂಶ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ:ಇಪಿ 180 ಎಸ್‌ಎಲ್‌ಬಿ 2024

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಅನುಬಂಧ-1

## 2024 SSLC Exam - 1 Zero Percent Result taken Schools list

| SL No | District | Govt | | Aided | | Unaided | |
|---|---|---|---|---|---|---|---|
| | | School count | Appeared student count | School count | Appeared student count | School count | Appeared student count |
| 1 | BENGALURU NORTH | 0 | 0 | 0 | 0 | 2 | 9 |
| 2 | BENGALURU SOUTH | 0 | 0 | 0 | 0 | 1 | 7 |
| 3 | RAMANAGARA | 0 | 0 | 0 | 0 | 0 | 0 |
| 4 | BENGALURU RURAL | 0 | 0 | 0 | 0 | 0 | 0 |
| 5 | CHIKKABALLAPURA | 0 | 0 | 0 | 0 | 0 | 0 |
| 6 | KOLAR | 0 | 0 | 0 | 0 | 2 | 13 |
| 7 | MADHUGIRI | 0 | 0 | 1 | 28 | 1 | 1 |
| 8 | TUMAKURU | 0 | 0 | 2 | 26 | 0 | 0 |
| 9 | CHAMARAJANAGARA | 0 | 0 | 0 | 0 | 0 | 0 |
| 10 | MYSURU | 0 | 0 | 0 | 0 | 0 | 0 |
| 11 | MANDYA | 0 | 0 | 0 | 0 | 1 | 8 |
| 12 | UDUPI | 0 | 0 | 0 | 0 | 0 | 0 |
| 13 | DAKSHINA KANNADA | 0 | 0 | 0 | 0 | 0 | 0 |
| 14 | KODAGU | 0 | 0 | 0 | 0 | 0 | 0 |
| 15 | DAVANAGERE | 0 | 0 | 1 | 9 | 2 | 12 |
| 16 | CHITRADURGA | 0 | 0 | 0 | 0 | 1 | 9 |
| 17 | CHIKKAMAGALURU | 0 | 0 | 0 | 0 | 1 | 5 |
| 18 | SHIVAMOGGA | 0 | 0 | 0 | 0 | 0 | 0 |
| 19 | HASSAN | 0 | 0 | 0 | 0 | 0 | 0 |
| 20 | HAVERI | 0 | 0 | 0 | 0 | 4 | 32 |
| 21 | GADAG | 0 | 0 | 0 | 0 | 0 | 0 |
| 22 | DHARWAD | 0 | 0 | 1 | 15 | 2 | 11 |
| 23 | CHIKKODI | 0 | 0 | 0 | 0 | 5 | 57 |
| 24 | BELAGAVI | 0 | 0 | 3 | 9 | 3 | 23 |
| 25 | BAGALAKOTE | 0 | 0 | 0 | 0 | 0 | 0 |
| 26 | VIJAYAPURA | 0 | 0 | 0 | 0 | 1 | 6 |
| 27 | SIRSI | 0 | 0 | 0 | 0 | 0 | 0 |
| 28 | UTTARA KANNADA | 0 | 0 | 0 | 0 | 0 | 0 |
| 29 | YADAGIRI | 2 | 18 | 0 | 0 | 5 | 19 |
| 30 | KALABURAGI | 0 | 0 | 3 | 41 | 15 | 59 |
| 31 | KOPPALA | 1 | 2 | 0 | 0 | 1 | 13 |
| 32 | RAICHURU | 0 | 0 | 1 | 11 | 4 | 18 |
| 33 | BIDAR | 0 | 0 | 1 | 14 | 8 | 78 |
| 34 | VIJAYANAGARA | 0 | 0 | 0 | 0 | 2 | 14 |
| 35 | BALLARI | 0 | 0 | 0 | 0 | 1 | 3 |
| **TOTAL** | | **3** | **20** | **13** | **153** | **62** | **397** |

ದಿನಾಂಕ: 11.07.2024

ನಿರ್ದೇಶಕರು (ಪರೀಕ್ಷೆಗಳು)